**ಸಿ.ಸಿ. ನಂಬ್ರ: 2287/2017** **CW-1**

ದಿನಾಂಕ: 05.08.2024

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:</u>**

ನನ್ನ ಮತ್ತು ನನ್ನ ಹೆಂಡತಿಯ ವಿರುದ್ದ ನಮ್ಮ ಸ್ವತ್ತಿನ ಸಂಬಂಧ 4 ಪ್ರಕರಣಗಳು ಬಾಕಿ ಇದೆ. 2010 ರಲ್ಲಿ ಇದೇ ಸ್ವತ್ತಿನ ಸಂಬಂಧ ಒಂದು ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಓ ಎಸ್ ನಂಬ್ರ 200/2015 ದಾಖಲಾಗಿದ್ದು ಇವರೆಗೂ ಬಾಕಿ ಇದೆ ಎಂದರೆ ಸರಿ. ಆರೋಪಿಗಳ ಪೈಕಿ 2, 12, 6, 13, 1 ನೇ ಆರೋಪಿತರು ನಮ್ಮ ಮನೆಯ ಅಕ್ಕಪಕ್ಕದವರಲ್ಲ ಎಂದರೆ ಸರಿ. 2010 ರಿಂದ ದಾರಿಯ ವಿಚಾರವಾಗಿ ತಕರಾರು ಇರುತ್ತದೆ. ನಮ್ಮ ಜಾಗದ ಪಶ್ಚಿಮ ದಿಕ್ಕಿನಲ್ಲಿ 6 ಅಡಿ ಅಗಲದ ದಾರಿ ಇದೆ ಎಂದರೆ ಸರಿಯಲ್ಲ. ಅದು ಉತ್ತರ ದಕ್ಷಿಣ ದಿಕ್ಕಿನಲ್ಲಿದೆ ಎಂದರೆ ಸರಿಯಲ್ಲ. ಕೆಲವು ಆರೋಪಿತರು ಹಾಗೂ ಸ್ಥಳೀಯರು ಸದ್ರಿ ದಾರಿಯನ್ನು ಅನಾದಿ ಕಾಲದಿಂದಲೂ ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ಅವರ ಮನೆಗಳಿಂದ ರಾ.ಹೆದ್ದಾರಿ ಅಥವಾ ಪೇಟೆಗೆ ಸದ್ರಿ ದಾರಿ ಸಂಪರ್ಕ ಕಲ್ಪಿಸುತ್ತದೆ ಎಂದರೆ ಸರಿಯಲ್ಲ.

ನಮ್ಮ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಬೇಲಿ ಇದೆ, ಪೂರ್ವ ದಿಕ್ಕಿನಲ್ಲಿ ಅರ್ಧ ಕಂಪೌಂಡ್ ಅನಂತರ ಬೇಲಿ, ಉತ್ತರಕ್ಕೆ ನೀರಿನ ತೋಡು ಇರುತ್ತದೆ. ಬೇಲಿಯನ್ನು ಹೊರತುಪಡಿಸಿ 6 ಅಡಿ ಅಗಲದ ದಾರಿ ಇದೆ ಎಂದರೆ ಸರಿಯಲ್ಲ. ದಾರಿಯ ಪಶ್ಚಿಮ ದಿಕ್ಕಿನಲ್ಲಿ ಸುನೀಲ್ ಖಾರ್ವಿ ರವರ ಜಾಗ ಬರುತ್ತದೆ ಎಂದರೆ ಸಾಕ್ಷಿಯು ನಮ್ಮ ಸ್ವತ್ತಿನ ಪಕ್ಕದಲ್ಲಿ ಸುನೀಲ್ ಖಾರ್ವಿರವರ ಜಾಗ ಮತ್ತು ಕಂಪೌಂಡ್ ಇದೆ ಎಂದು ಉತ್ತರಿಸುತ್ತಾರೆ. ನಮ್ಮ ಮತ್ತು ಅವರ ಸ್ವತ್ತಿನ ನಡುವೆ 6 ಅಡಿ ಅಗಲದ ದಾರಿ ಇದ್ದು ಉತ್ತರ ದಕ್ಷಿಣವಾಗಿ ಹೋಗುತ್ತದೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ನಾವು ಸ್ಥಳೀಯರಿಗೆ ತೊಂದರೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ದಿ: 10-03-2016 ರಲ್ಲಿ ಗಲಾಟೆಯಾಗಿರುತ್ತದೆ. ಘಟನೆ ಕಾಲಕ್ಕೆ 13 ಜನ ಸೇರಿದ್ದರು. ನಮಗೆ ಕಲ್ಲಿನಿಂದ ಹಲ್ಲೆ ಮಾಡಿದ್ದು ನನ್ನ ಭುಜಕ್ಕೆ ಪೆಟ್ಟಾಗಿರುತ್ತದೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. 2, 6, 7 ಮತ್ತು 11ನೇ ಆರೋಪಿತರು ಕಲ್ಲನ್ನು 20 ಅಡಿ ದೂರದಿಂದ ಎಸೆದಿರುತ್ತಾರೆ. ನಮ್ಮ ಮನೆಯ ರೂಂನ ಕಿಟಕಿಯ ಗಾಜು ಒಡೆದಿರುತ್ತದೆ. ಅದೇ ದಿನ ಪೊಲೀಸರಿಗೆ ದೂರು

ನೀಡಿರುತ್ತೇನೆ. ಅನಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿಲ್ಲ. ನಂತರ ಪೊಲೀಸರ ಮೇಲಾಧಿಕಾರಿಯವರಿಗೆ ದೂರು ನೀಡಿಲ್ಲ. ಗಾಜು ಮತ್ತು ಕಲ್ಲನ್ನು ನಾನು ಪೊಲೀಸ್ ಠಾಣೆಗೆ ಹಾಜರುಪಡಿಸಿಲ್ಲ. ಪೊಲೀಸರು ತನಿಖೆ ಮಾಡಿ ಅದು ಸುಳ್ಳು ಪ್ರಕರಣವೆಂದು ವರದಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ವರದಿ ಮಾತ್ರ ನೀಡಿರುವುದಾಗಿ ಉತ್ತರಿಸಿರುತ್ತಾರೆ.

ಘಟನೆಯನ್ನು ಶ್ರೀನಿವಾಸ ಆಚಾರಿ ಮತ್ತು ವಾಸುದೇವ ನೋಡಿರುತ್ತಾರೆ. ಘಟನೆಯ ಬಗ್ಗೆ ಯಾವುದೇ ಪೋಟೋ ಪೊಲೀಸ್ ಠಾಣೆಗೆ ನಾನು ಹಾಜರುಪಡಿಸಿಲ್ಲ. ಪೊಲೀಸರು ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ ಎಂದು 2-3 ದಿನಗಳ ನಂತರ ತಿಳಿದು ಬಂತು. ನನ್ನ ಸ್ವತ್ತಿನ ಪಶ್ಚಿಮಕ್ಕೆ ಇದ್ದ ದಾರಿಯನ್ನು ಆರೋಪಿಗಳು ಉಪಯೋಗಿಸಬಾರದೆಂಬ ದುರುದ್ದೇಶದಿಂದ ನಾನು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ತನಿಖೆ ಮಾಡಿ ಪೊಲೀಸರು ಅದು ಸುಳ್ಳು ಪ್ರಕರಣ ವೆಂದು ವರದಿ ಸಲ್ಲಿಸಿದ್ದರೂ ಆರೋಪಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದ ಈ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸ್ಥಳೀಯರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದೇನೆಂದರೆ ಸರಿಯಲ್ಲ. ಯಾವುದೇ ಕಲ್ಲು, ದೊಣ್ಣೆಯಿಂದ ತನಗೆ ಹಲ್ಲೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಹೊಡೆಯಲು ಮುಂದಾಗಿ ತಾನು ಮನೆಯ ಒಳಗೆ ಹೋಗಿರುವುದಾಗಿ ನುಡಿದಿರುತ್ತಾರೆ. ಅವರು ನಮ್ಮ ಮನೆಯ ಪಾಗಾರವನ್ನು ಪಿಕಾಶಿಯಿಂದ ನಾಶ ಮಾಡಿ ನನಗೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

ಸದ್ರಿ ದಿನ ಆರೋಪಿತರು ನನ್ನ ಮೇಲೆ ಹೇಳಿದಂತೆ ಯಾವುದೇ ಹಲ್ಲೆ ಮಾಡಿ ಸ್ಥಳದಲ್ಲಿ ಯಾವುದೇ ಘಟನೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪಿರ್ಯಾದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಅಕ್ರಮ ಪ್ರವೇಶ ಮಾಡಿ ಗುಂಪುಗಾರಿಕೆ ಮಾಡಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 11 ಮತ್ತು 12ನೇ ಆರೋಪಿತರ ಪರ ವಕೀಲರಾದ ಶ್ರೀ ಬಿ ಎಸ್ ಕೆ ರವರಿಂದಃ</u>

ನಮ್ಮ ಮನೆ ಬೀಜಾಡಿ ಗ್ರಾಮ ಪಂಚಾಯಿತಿಗೆ ಸೇರುತ್ತದೆ. ನಾನು ಆನಂದ ಎಂಬ ಪಿ ಡಿ ಓ ರವರ ಮೇಲೆ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸಾಕ್ಷಿಯು ಬೀಜಾಡಿ ಗ್ರಾಮ ಪಂಚಾಯಿತಿಯ ಪಿ ಡಿ ಓರವರ ಮೇಲೆ ದಾಖಲಿಸಿದ್ದು ಎಂದು ನುಡಿಯುತ್ತಾರೆ. ಗಣೇಶ್ ಎಂಬ ಪಿ ಡಿ ಓರವರ ಬಗ್ಗೆ ನನಗೆ

ಯಾವುದೇ ಮಾಹಿತಿ ಇಲ್ಲ. ಸ್ಥಳದಲ್ಲಿ ಹಾಜರು ಇದ್ದ 12ನೇ ಆರೋಪಿ ನಾರಾಯಣರವರ ಮೇಲೆ ದೂರು ನೀಡಿರುತ್ತೇನೆ. ನಾನು ತೆರಿಗೆಯನ್ನು ಪಾವತಿಸುವುದು ಬಿಟ್ಟು ಪಂಚಾಯಿತಿ ಕಚೇರಿಗೆ ಭೇಟಿ ನೀಡಿಲ್ಲ. ಗ್ರಾಮದಲ್ಲಿ ಯಾವುದೇ ತೊಂದರೆ ಬಂದರೂ ಪಂಚಾಯಿತಿಗೆ ದೂರು ನೀಡುತ್ತೇವೆ. ಆರೋಪಿತರು ತೊಂದರೆಯಾಯಿತು ಎಂದು ಪಂಚಾಯಿತಿಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ದೂರಿನ ಮೇಲೆ ಪಿ ಡಿ ಓ ರವರು ತಹಶೀಲ್ದಾರವರಿಗೆ ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಿರುಕುಳ ಕೊಡುವ ಉದ್ದೇಶದಿಂದ 11 ಮತ್ತು 12ನೇ ಆರೋಪಿತರನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವ ಜಾತಿಗೆ ಸೇರಿದ್ದರು ಎಂದು ನನಗೆ ಗೊತ್ತಿಲ್ಲ.

**ಉಳಿದ ವಾಟೀ ಸವಾಲನ್ನು ಮೇಲೆ ಹೇಳಿದ ಆರೋಪಿತರ ಪರ ವಕೀಲರು ಮಾಡಿದ ವಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ